ಇ) ಈ ಯೋಜನೆಯ ಮೊದಲನೇ ಹಂತದಲ್ಲಿ ಎಷ್ಟು ಹೆಕ್ಟೇರ್ ಪ್ರದೇಶ ನೀರಾವರಿ ಮಾಡಲಾಗುವುದು;

ಈ) ಮೊದಲನೆ ಹಂತವನ್ನು ಚುರುಕುಗೊಳಿಸಲು ಸರ್ಕಾರವು ಕೈಗೊಂಡಿರುವ ಕಾರ್ಯಕ್ರಮಗಳೇನು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):–

ಅ) 58.20 ಕೋಟಿ ರೂ.ಗಳು

ಆ) 1214.97 ಕೋಟಿ ರೂ.ಗಳ ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲ ಘಟ್ಟದ ಪರಿಷ್ಕೃತ ಅಂದಾಜಿಗೆ ಯೋಜನಾ ಆಯೋಗವು 1990ರಲ್ಲಿ ಅಂಗೀಕಾರ ನೀಡಿರುತ್ತದೆ.

ಇ) ಮೊದಲ ಘಟ್ಟದ ಈ ಯೋಜನೆಯಿಂದ 4.25 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗುತ್ತದೆ.

ಈ) ಮೊದಲ ಘಟ್ಟದ ಯೋಜನೆಯನ್ನು ಹಂತ ಹಂತವಾಗಿ ನಿರ್ಮಾಣ ಮಾಡಲಾಗುತ್ತಿದ್ದು. ಯೋಜನೆಯನ್ನು ತ್ವರಿತಗೊಳಿಸುವ ದೃಷ್ಟಿಯಿಂದ ಮೊದಲ ಮತ್ತು 2ನೇ ಹಂತದ ಯೋಜನೆಗಳಿಗೆ ವಿಶ್ವ ಬ್ಯಾಂಕ್ ನೆರವು ಪಡೆಯಲಾಗಿದೆ.

Length of Irrigation Roads in Sindhanur Taluk.

171 (342): Sri B. Hampanagowda (Sindhanur):–

Will the Deputy Chief Minister be pleased to state.

a) what is the length of Irrigation Roads in Sindhanur Taluk;

b) whether any provision has been made in the current year's Budget for taking up repairs to these Irrigation Roads?

Sri S.M. KRISHNA (Deputy Chief Minister):–

a) The total length of Irrigation Roads in Sindhanoor Taluk is 232.40 K.M.

b) as 5.00 lakhs has been allotted to Sindhanoor Division during the current year 1992-93.

ಅಪ್ಪರ್ ಕೃಷ್ಣ ಪ್ರಾಜೆಕ್ಟ್ ಕೆಲಸ ನಿಧಾನ ಆಗುತ್ತಿರುವ ಬಗ್ಗೆ

173 (732): ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ):–

ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಕೃಷ್ಣಾ ಮೇಲ್ದಂಡೆ ಯೋಜನೆಗೆ ವಿಶ್ವ ಬ್ಯಾಂಕ್‌ನಿಂದ ನೆರವು ಪಡೆದಿದ್ದರೂ ಇಂಜಿನಿಯರುಗಳ ಕೊರತೆಯಿಂದ ಕೆಲಸ ವಿಳಂಬವಾಗುತ್ತಿರುವುದು ಸರ್ಕಾರಕ್ಕೆ ತಿಳಿದಿದೆಯೇ;

ಆ) ಹಾಗಿದ್ದಲ್ಲಿ ಆ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು;

ಇ) ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಶೇಕಡಾ 80 ರಷ್ಟು ಈ ಭಾಗದ ಜನರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಸರ್ಕಾರ ನಿರ್ಧಾರ ಮಾಡಿರುವುದು ನಿಜವೇ ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):–

ಅ) ಹೌದು.

ಆ) ಸರ್ಕಾರವು ಇಂಜಿನಿಯರುಗಳ ನೇಮಕಾತಿ ಬಗ್ಗೆ ನೇಮಕಾತಿ ಸಮಿತಿಯನ್ನು ರಚಿಸಿದ್ದು, ಈ ವಿಷಯದಲ್ಲಿ ಕಾರ್ಯೋನ್ಮುಖವಾಗಿದೆ.

ಇ) ಸರ್ಕಾರಿ ಆದೇಶಗಳ ಅನ್ವಯ ಶೇಕಡಾ 75 ಭಾಗ ಹುದ್ದೆಗಳನ್ನು ಕೃಷ್ಣಾ ಮೇಲ್ದಂಡೆ ಯೋಜನೆ ಭಾಗದಲ್ಲಿ ಇರುವ ಅಭ್ಯರ್ಥಿಗಳಿಗೆ ನಿಗದಿಪಡಿಸಿದೆ.

ಬೆಳಗಾವಿ ಜಿಲ್ಲೆಯ ಕಾಡಾದವರಿಂದ ಹಣ ಮಂಜೂರಾತಿ

180 (986): ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):–

ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಬೆಳಗಾವಿ ಜಿಲ್ಲೆಯ ಕಾಡಾದವರು ಈ ವರ್ಷ ಎಷ್ಟು ಎಷ್ಟು ಹಣವನ್ನು ಯಾವ ಯಾವ ಕೆಲಸಗಳಿಗೆ ಒದಗಿಸಿರುವುದು ಹಾಗೂ ಈ ವರ್ಷ ಇಲ್ಲಿಯವರೆಗೆ ಯಾವ ಯಾವ ಕೆಲಸಕ್ಕಾಗಿ ಎಷ್ಟು ಎಷ್ಟು ಹಣವನ್ನು ಖರ್ಚು ಮಾಡಿರುವರು; (ಕೆಲಸದ ಹೆಸರು ಹಾಗೂ ಎಲ್ಲ ಸಂಪೂರ್ಣ ವಿವರ ಕೊಡುವುದು);

ಆ) ಕಾಡಾ ಅಧಿಕಾರಿಗಳು ಈ ವರ್ಷ ಹೊಲ ಸಮಪಾತಳಿ ಮಾಡುವ ಸಲುವಾಗಿ ಎಷ್ಟು ಕೆಲಸಗಳಿಗೆ ಒಪ್ಪಿಗೆ ನೀಡಿರುವರು; (ಕೆಲಸದ ಹೆಸರು ಮತ್ತು ಬ್ಯಾಂಕಿನಿಂದ ಹಣ ಒದಗಿಸಿದ್ದಲ್ಲಿ ಬ್ಯಾಂಕಿನ ಹೆಸರು ಎಲ್ಲ ಸಂಪೂರ್ಣ ವಿವರ ಕೊಡುವುದು);

ಇ) ಒಂದು ವೇಳೆ ಹೊಲ ಸಮಪಾತಳಿ ಮಾಡುವ ಸಲುವಾಗಿ ಕಾಡಾ ಅಧಿಕಾರಿಗಳು ಯಾವುದೇ ಕೆಲಸ ತೆಗೆದುಕೊಳ್ಳದೇ ಇದ್ದಲ್ಲಿ ಅಂಥ ಅಧಿಕಾರಿಗಳ ಮೇಲೆ ಸರ್ಕಾರದವರು ಯಾವ ಕ್ರಮ ಕೈಗೊಳ್ಳುವರು;

ಈ) ಮಾನ್ಯ ಕಂದಾಯ ಸಚಿವರು ಅಧ್ಯಕ್ಷತೆಯಲ್ಲಿ ಬೆಳಗಾವಿ ಜಿಲ್ಲಾಧಿಕಾರಿಗಳವರ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಅತೀವೃಷ್ಟಿಯಿಂದ ಹಾನಿಗೊಳಗಾದ ಬೈಲಹೊಂಗಲ ತಾಲೂಕಿನ ಉಡಕೇರಿ ಗ್ರಾಮದ ಜನರು ಕಾಡಾ ಇಲಾಖೆಯಿಂದ ತೆಗೆದುಕೊಂಡ ಸಾಲವನ್ನು ಸೂಟ ಬಿಡಬೇಕೆಂದು ನಿರ್ಣಯಿಸಿದ್ದು ಈ ಬಗ್ಗೆ ಕಾಡಾ ಅಧಿಕಾರಿಗಳು ಸೂಟ ಬಿಡಲು ಯಾವ ಕ್ರಮ ಕೈಗೊಂಡಿರುವರು;

ಉ) ಹಾಗಿದ್ದಲ್ಲಿ ಮಾನ್ಯಮಂತ್ರಿಗಳ ಆದೇಶದ ಪ್ರಕಾರ ಇನ್ನೂವರೆಗೂ ಯಾವುದೇ ಕ್ರಮ ಕೈಗೊಳ್ಳದೇ ಇದ್ದಲ್ಲಿ ಇನ್ನು ಮೇಲೆ ಆದರೂ ರೈತರ ಸಾಲವನ್ನು ಸೂಟ ಬಿಡುವ ಸಲುವಾಗಿ ಸರ್ಕಾರದವರು ಕ್ರಮ ಕೈಗೊಳ್ಳುವುದೇ ?

ಶ್ರೀರಂಗದೇವರಾಯಲು (ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು):–

ಅ) ಕಾಡಾ, ಘಟಪ್ರಭಾ ಮತ್ತು ಮಲಪ್ರಭಾ ಯೋಜನೆ, ಬೆಳಗಾವಿ ಆಡಿಯಲ್ಲಿ ಈ ವರ್ಷ ತೆಗೆದುಕೊಂಡ ಕೆಲಸಗಳ ವಿವರ ಅದಕ್ಕಾಗಿ ಒದಗಿಸಿರುವ ಹಣ ಹಾಗೂ ಇದುವರೆಗೆ ಆ ಕೆಲಸಗಳಿಗೆ ಖರ್ಚಾದ ಹಣದ ವಿವರಗಳನ್ನು ಅನುಬಂಧ – 1 ರಲ್ಲಿ ಒದಗಿಸಲಾಗಿದೆ.